**ಓ.ಎಸ್. ನಂಃ 160/2020**

**ಡಿ.ಡಬ್ಲ್ಯೂಃ 1**

**ದಿನಾಂಕ 15.12.2025 ರಂದು ಸಾಕ್ಷಿದಾರರನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ವಾದಿ ಪರ ಶ್ರೀ.ಕೆ.ಎಸ್.ಡಿ ವಕೀಲರಿಂದಃ**

7. 3 ನೇ ಪ್ರತಿವಾದಿಯು ಹೊಳೆನರಸೀಪುರದಲ್ಲಿ ವಾಸವಿದ್ದಾರೆ. 3 ನೇ ಪ್ರತಿವಾದಿಯು ನಮ್ಮೊಂದಿಗೆ ಮತ್ತು ನಮ್ಮ ಕುಟುಂಬದವರೊಡನೆ ಅನ್ಯೋನ್ಯವಾಗಿಲ್ಲ. 3 ನೇ ಪ್ರತಿವಾದಿಗೆ ಹೆಂಡತಿ ಮತ್ತು ಮಕ್ಕಳು ಇದ್ದಾರೆ. ಸಾಕ್ಷಿಯು ಮುಂದುವರೆದು 3 ನೇ ಪ್ರತಿವಾದಿಗೆ ಪಾರ್ಶುವಾಯು ಆಗಿ ಅವರಿಗೆ ಜ್ಞಾನ ಇಲ್ಲಾ ಎಂದು ಸ್ವತಃ ನುಡಿದಿರುತ್ತಾರೆ. 3 ನೇ ಪ್ರತಿವಾದಿಗೆ ಜ್ಞಾನ ತಪ್ಪಿ ಹೋಗಿ ಸುಮಾರು 4 ವರ್ಷಗಳಾಗಿರುತ್ತವೆ. 3 ನೇ ಪ್ರತಿವಾದಿಯು ಹೊಳೆನರಸೀಪುರಕ್ಕೆ ಹೋಗಿ ಸುಮಾರು 10 ರಿಂದ 15 ವರ್ಷಗಳಾಗಿರುತ್ತವೆ.

8. 3 ನೇ ಪ್ರತಿವಾದಿಯ ಅನಾರೋಗ್ಯದ ಲಾಭವನ್ನು ಪಡೆದು ನಾವು ನಿಡಿ-1 ರ ವಿಭಾಗ ಪತ್ರಕ್ಕೆ ಮೋಸದಿಂದ 3 ನೇ ಪ್ರತಿವಾದಿಯ ಸಹಿಯನ್ನು ಪಡೆದಿರುತ್ತೇವೆ ಎಂದು ಹೇಳಿ 3 ನೇ ಪ್ರತಿವಾದಿಯ ಹೆಂಡತಿ ಮತ್ತು ಮಕ್ಕಳು ನಮ್ಮ ವಿರುದ್ಧ ಸಾಲಿಗ್ರಾಮ ಪೊಲೀಸ್ ಠಾಣೆಯಲ್ಲಿ ದೂರನ್ನು ನೀಡಿದ್ದರು ಎಂದರೆ ಸರಿಯಲ್ಲ. ನನ್ನ ಮತ್ತು ವಾದಿಯ ತಾಯಿಯ ವಿವಾಹವಾದ 5 ವರ್ಷಗಳ ಬಳಿಕ ವಾದಿಯ ತಾಯಿಯಾದ ಶೀಲಾ ರವರು ವಾದಿ ಮತ್ತು 8 ನೇ ಪ್ರತಿವಾದಿಯ ಸಮೇತ ತಮ್ಮ ತವರು ಮನೆಗೆ ಹೋಗಿರುತ್ತಾರೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಮ್ಮ ವಿವಾಹದ 7-8 ವರ್ಷಗಳ ಬಳಿಕ ಶೀಲಾ ಮತ್ತು ವಾದಿ ಹಾಗೂ 8 ನೇ ಪ್ರತಿವಾದಿ ನನ್ನನ್ನು ಬಿಟ್ಟು ಹೋಗಿರುತ್ತಾರೆಂದು ಸ್ವತಃ ನುಡಿದಿರುತ್ತಾರೆ. ಅಂದಿನಿಂದ ಇಂದಿನ ವರೆಗೂ ನಾನು ನನ್ನ ಹೆಂಡತಿ ಮತ್ತು ಮಕ್ಕಳನ್ನು ನೋಡಿಕೊಂಡಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾವೆಲ್ಲಾ ಸೇರಿ ವಾದಿಯ ವಿವಾಹ ಮಾಡಿಕೊಟ್ಟಿರುತ್ತೇವೆ ಎಂದು ಸ್ವತಃ ನುಡಿದಿರುತ್ತಾರೆ.

9. ವಾದಿಯನ್ನು ನಾವು ಮುದುಗುಪ್ಪೆ ಗ್ರಾಮಕ್ಕೆ ವಿವಾಹ ಮಾಡಿಕೊಟ್ಟಿರುತ್ತೇವೆ. ನಾನು ವಾದಿಯ ವಿವಾಹವನ್ನು ಮಾಡಿಸಿರುವುದಿಲ್ಲ ಬದಲಾಗಿ ವಾದಿಯ ತಾಯಿಯಾದ ಶೀಲಾ ರವರೇ ಸಂಪೂರ್ಣ ಖರ್ಚು ವೆಚ್ಚಗಳನ್ನು ಮಾಡಿ ವಾದಿಯ ವಿವಾಹ ಮಾಡಿಸಿಕೊಟ್ಟಿರುತ್ತಾರೆ ಎಂದರೆ ಸರಿಯಲ್ಲ. ನಾನು ಇಂದಿನವರೆಗೂ ವಾದಿ, 8 ನೇ

ಪ್ರತಿವಾದಿ ಮತ್ತು ನನ್ನ ಹೆಂಡತಿಯಾದ ಶೀಲಾರವರಿಗೆ ನ್ಯಾಯಾಲಯದಲ್ಲಿ ಜೀವನಾಂಶದ ಹಣವನ್ನು ಕಟ್ಟುತ್ತಿದ್ದೇನೆ ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

10. ದಾವಾ ಐಟಂ ನಂಬರ್ 3 ಮತ್ತು 4 ರ ಆಸ್ತಿಗಳನ್ನು ಕ್ರಯಕ್ಕೆ ಕೊಂಡ ಬಗ್ಗೆ ನಾನು ಕ್ರಯ ಪತ್ರಗಳನ್ನು ನ್ಯಾಯಾಲಯಕ್ಕೆ ಹಾಜರುಪಡಿಸಬಲ್ಲೆ. ನಿಡಿ-1 ರ ವಿಭಾಗಪತ್ರವನ್ನು ಮಾಡಿಸಿಕೊಳ್ಳುವ ಕಾಲಕ್ಕೆ ನನ್ನ ವಿರುದ್ಧ ಹಲವಾರು ಸಿವಿಲ್ ವ್ಯಾಜ್ಯ, ಜೀವನಾಂಶ ಪ್ರಕರಣಗಳು ಹಾಗೂ ಕ್ರಿಮಿನಲ್ ಪ್ರಕರಣಗಳು ನೆಡೆಯುತ್ತಿದ್ದವು ಎಂದರೆ ಸರಿಯಲ್ಲ. ವಾದಿ ಮತ್ತು ಮತ್ತು 8 ನೇ ಪ್ರತಿವಾದಿಗೆ ದಾವಾ ಆಸ್ತಿಗಳಲ್ಲಿ ಪಾಲು ಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ನಾನು ಬೆಲೆ ಬಾಳುವ ಆಸ್ತಿಗಳನ್ನು ನಿಡಿ-1 ರ ಅಡಿಯಲ್ಲಿ ನನ್ನ ಸಹೋದರ-ಸಹೋದರಿಯರಿಗೆ ಕೊಟ್ಟು ಬೆಲೆ ಬಾಳದೇ ಇರುವ ಆಸ್ತಿಗಳನ್ನು ನನ್ನ ಪಾಲಿಗೆ ಇಟ್ಟುಕೊಂಡಿದ್ದೇನೆ ಎಂದರೆ ಸರಿಯಲ್ಲ. ಕೇವಲ ವಾದಿಗೆ ಮೋಸ ಮಾಡುವ ಉದ್ದೇಶದಿಂದ ನಾನು ನಿಡಿ-1 ರ ದಾಖಲೆಯನ್ನು ಸೃಷ್ಟಿಸಿರುತ್ತೇನೆ ಎಂದರೆ ಸರಿಯಲ್ಲ. ದಾವಾ ಆಸ್ತಿಗಳಲ್ಲಿ ವಾದಿಗೆ ಪಾಲು ಕೊಡುವುದನ್ನು ತಪ್ಪಿಸುವ ಉದ್ದೇಶದಿಂದ ನಾನು ಸುಳ್ಳು ಸಾಕ್ಷಿಯನ್ನು ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರುವಿಚಾರಣೆ ಇಲ್ಲ.**

(ಸಾಕ್ಷಿ ಹೇಳಿಕೆಯನ್ನು ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ. ಹೇ. ಕೇ. ಸರಿ ಇದೆ.**

**1 ನೇ ಹೆಚ್ಚುವರಿ ಸಿವಿಲ್ ಮತ್ತು ಜೆಎಂಎಫ್‌ಸಿ**
**ನ್ಯಾಯಾಧೀಶರು, ಕೆ.ಆರ್.ನಗರ.**